ದಿಃ **12.01.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀಮತಿ ಎಸ್.ಹೆಚ್.ವಕೀಲರಿಂದಃ

ನಾನು ಈ ಪ್ರಕರಣದಲ್ಲಿ **6** ನೇ ವಾದಿಯಾಗಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯವನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ನಿಜವಿದ್ದು ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕ **22.08.1968** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ.**1,** ದಿನಾಂಕ **01.03.2011** ರ ದೃಢೀಕೃತ ನಕಲಿನ ವ್ಯವಸ್ಥಾ ಪತ್ರವನ್ನು ನಿಪಿ.**2,** ದಿನಾಂಕ **07.03.2017** ರ ವಕೀಲರ ಕಚೇರಿಯ ನೋಟೀಸ್ ನ ಪ್ರತಿಯನ್ನು ನಿಪಿ.**3, 9** ಅಂಚೆ ಸ್ವೀಕೃತಿಗಳನ್ನು ನಿಪಿ.**4** ರಿಂದ ನಿಪಿ.**12,** ದಿನಾಂಕ **14.03.2017** ರ ಉತ್ತರದ ನೋಟೀಸ್ ನ್ನು ನಿಪಿ.**13,** ದಿನಾಂಕ **27.03.2017** ರ ಉತ್ತರದ ನೋಟೀಸ್ ನಿಪಿ.**14,** ಸರ್ವೇ ನಂಬ್ರ **45/1** ರ ಪಹಣಿ ಪತ್ರಿಕೆಯನ್ನು ನಿಪಿ.**15,** ಸರ್ವೇ ನಂಬ್ರ **45/2** ರ ಪಹಣಿ ಪತ್ರಿಕೆಯನ್ನು ನಿಪಿ.**16,** ಸರ್ವೇ ನಂಬ್ರ **45/3** ರ ಪಹಣಿ ಪತ್ರಿಕೆಯನ್ನು ನಿಪಿ.**17,** ಸರ್ವೇ ನಂಬ್ರ **45/4** ರ ಪಹಣಿ ಪತ್ರಿಕೆಯನ್ನು ನಿಪಿ.**18,** ವಲಯ ಅರಣ್ಯಾಧಿಕಾರಿ, ಹೆಬ್ರಿ ವಲಯ, ಹೆಬ್ರಿ ಇವರಿಂದ ಪ್ರ.ವ.ವ.ಯ ಟ್ರೂ ಕಾಪಿಯನ್ನು ನಿಪಿ.**19,** ಅಪರಾಧ ಸಂಖ್ಯೆ **42/2014** ರ ಪ.ವ.ವ.ಯ ಕಾಪಿಯನ್ನು ನಿಪಿ.**20,** ಖಾಸಗಿ ದೂರು **199/2014** ರ ದೂರಿನ ದೃಢೀಕೃತ ನಕಲನ್ನು ನಿಪಿ.**21,** ಪಿ.ಸಿ.ಆರ್.**199/2014** ರ ದೃಢೀಕೃತ ನಕಲಿನ ಆದೇಶ ಪುಟಗಳು ನಿಪಿ.**22,** ಕುಟುಂಬ ಜೀವಿತ ಸದಸ್ಯರ ದೃಢೀಕರಣ ಪತ್ರದ ದಾಖಲೆ ನಿಪಿ.**23,** ಗುಂಡು ಶೆಟ್ಟಿಯವರ ಮರಣ ಪ್ರಮಾಣ ಪತ್ರ ನಿಪಿ.**24,** ರಾಧಮ್ಮ ಶೆಡ್ತಿ ಯವರ ಮರಣ ಪ್ರಮಾಣ ಪತ್ರ ನಿಪಿ.**25,** ಮಾಹಿತಿ ಹಕ್ಕು ಕಾಯ್ದೆಯಡಿ ಹೆಬ್ರಿ ವಲಯ ಅರಣ್ಯಾಧಿಕಾರಿಯವರಿಂದ ಪಡೆದಿರುವ ಮಾಹಿತಿಯ ದಾಖಲೆಗಳು ಒಟ್ಟು **13** ಪುಟಗಳಿದ್ದು ಅವುಗಳನ್ನು ಒಟ್ಟಾಗಿ ನಿಪಿ.**26** ಎಂದು ಗುರ್ತಿಸಲಾಯಿತು.

ಮುದುವರೆದ ಮುಖ್ಯ ವಿಚಾರಣೆ: ಸಮಯ ಕೋರಿದ್ದು ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ